ಸಂತುಲನೆ ಹೊರಟು ಹೋಯಿತಂತೆ. ಅಂದರೆ ಪೂರ್ತಿ ಸ್ವಾಧೀನ ತಪ್ಪಿತು ಅಂತೇನಲ್ಲ... ಹೌದೋ ಅಲ್ಲವೋ ಅನ್ನೋಹಾಗೆ ಮೈ ತೂರಾಡೋದು ಅಷ್ಟೆ! ತಕ್ಷಣ, ನನ್ನ ವಾರಗಿತ್ತಿ ಮತ್ತು ಎರಡೂ ಹೆಣ್ಣುಮಕ್ಕಳು ಸೇರಿಕೊಂಡು – ಮಹಾಶಯನ್ನ ಇಲ್ಲೇ ಬಾಣಸವಾಡೀಲೊಂದು ವೃದ್ಧಾಶ್ರಮಕ್ಕೆ ಸೇರಿಸಿ, ತಮಗೂ ಅವನಿಗೂ ಸಂಬಂಧವೇ ಇಲ್ಲ ಅನ್ನೋ ಹಾಗೆ – ಕೈತೊಳಕೊಂಡು ಬಿಡೋದಾ?! ಇಷ್ಟು ಹತ್ತಿರ ಇದೀವಿ – ನಮಗೆ ಸೈತ ಒಂದು ಮಾತು ಹೇಳಲಿಲ್ಲ... ಒಂದೇ ವಾರದಲ್ಲಿ ಇಷ್ಟೆಲ್ಲ ನಡೆಸಿ, ಇಲ್ಲಿರೋ ಅಪಾರ್ಟ್‌ಮೆಂಟ್ ಕೂಡ ಮಾರಾಟ ಮಾಡಿಕೊಂಡು ಹೊರಟೇಹೋದರು... ಮೂರ್ನಾಕು ತಿಂಗಳಾದ ಮೇಲೆ ಬದರೀನೇ ಒಂದು ಸರ್ತಿ ಫೋನ್ ಮಾಡಿದ್ದ. ಹಾಗಾಗಿ ವಿಷಯ ತಿಳೀತು... ಆರು ತಿಂಗಳಾಯಿತು ಅವನು ಸತ್ತು... ಎಷ್ಟು ಬೇಜಾರಾಗುತ್ತೆ ನೋಡಿ...'

ಮಾತು ಮುಗಿಸುವ ಸುಮಾರಿಗೆ, ಅಮ್ಮನ ಕಣ್ಣುಗಳಲ್ಲಿ ಪಸೆಗೂಡಿಕೊಂಡು ಬಂದು ಧ್ವನಿ ಗದ್ಗದಗೊಂಡಿತ್ತು.

ಪುರೋಹಿತ ಈ ಕುರಿತೇ ಇನ್ನೊಂದಿಷ್ಟು ಮಾತು ಬೆಳೆಸಿದ. ಬದರಿ–ಅಂಕಲ್ ಬಗ್ಗೆಯೇ ಇನ್ನಷ್ಟು ಕೆದಕಿ, 'ಏನಾಗಿತ್ತು?' ಎಂದು ಕೇಳಿದ. ಅಂದರೆ ಸಾಯುವಂಥದ್ದು ಏನಾಗಿತ್ತು ಎಂಬ ಪ್ರಶ್ನೆ! ನಡುನಡುವೆ, 'ಛೇ... ಪಾಪ!' ಅಂತಲೂ ಸಮಾಧಾನ ಕೈಕೊಂಡ.

'ಎಪ್ಪತ್ತೆರಡು ವಯಸ್ಸು ಅಷ್ಟೇ...' ಅಮ್ಮ ಹೇಳುತ್ತಿರುವಾಗಲೇ, ಕುಂದಗೌರಿ – 'ವಯಸ್ಸಾದ ಮೇಲೆ ಏನು ಸರಿಯಿರಲ್ಲ ಅಂತ ಕೇಳಿ, ಭಟ್ಟರೇ... ಅರವತ್ತು ದಾಟಿದ ಮೇಲೆ ಇರೋದೂಂದರೆ ಬೋನಸ್ಸೇ ಅಲ್ಲವಾ?' ಅನ್ನುತ್ತ ತನ್ನದೂ ಒಂದು ಮಾತು ತುರುಕಿದಳು.

'ಅವನು ಸತ್ತಾಗ ಹೇಳುತೀನಿ – ನನ್ನ ವಾರಗಿತ್ತಿ ಬಂದು ಕೂಡ ನೋಡಲಿಲ್ಲ, ಕಣ್ರೀ... ಬೇಜಾರಾಗುತ್ತೆ!' ಅಮ್ಮ, ಲೊಚಕ್ಕನೆ ಉಗುಳು ನುಂಗಿಕೊಂಡು ಹೇಳಿದಳು.

'ಹೀಗೂ ಉಂಟಾ ಅಂತನಿಸುತ್ತೆ! ದೊಡ್ಡ ಮಗಳೊಬ್ಬಳೇ ಬಂದು ಕ್ರಿಮೇಶನ್ ಮಾಡಿಸಿ ವಾಪಸುಹೋದಳು... ನಾನೇ ಅವನ ಹೆಸರಿನಲ್ಲಿ ಆರ್ಯಾವರ್ತದಲ್ಲಿ ನಾಲಕ್ಕು ಬ್ರಾಹ್ಮಣರಿಗೆ ಊಟ ಹಾಕಿಸಿದೆ...'

'ಛೇ... ಪಾಪ!' ಪುರೋಹಿತ ಮತ್ತೊಮ್ಮೆ ಹೇಳಿದ.

ಆ ಮುಂದಕ್ಕೆ, ಸತ್ತವರ ಬಗೆಗೇ ಮತ್ತೊಂದಿಷ್ಟು ಮಾತು ಜರುಗಿದವು. ಈ ನಡುವೆ, ಈ ಪುರೋಹಿತನೂ ತನ್ನ ಸಂಸಾರದಿಂದಲೂ ಕೆಲವು ಸಾವಿನ ಪ್ರಸಂಗಗಳನ್ನು ಹೆಕ್ಕಿ ಹೆಕ್ಕಿ ತೋಡಿಕೊಂಡ. ಅತ್ತೆ – ಸೊಸೆಯರಿಬ್ಬರೂ, ಹೀಗೆ ಪರಿಪರಿಯಾದ ಸಾವಿನ ಸಂಗತಿಗಳನ್ನೆಲ್ಲ – ಸಾಧಾರಣ ಕುಶಲೋಪರಿಯೆನ್ನುವ ಹಾಗೆ, ಮರಣವೆಂಬುದೂ ಪುರಾಣವೆನ್ನುವ ಹಾಗೆ, ಕುಳಿತು ಕಿವಿ – ಕಿವಿ ನಿಮಿರಿ ಕೇಳಿಸಿಕೊಂಡರು. ಅವನು ಹೇಳಿದನೆಂದು ಅಮ್ಮನೂ, ಅಮ್ಮ ಹೇಳಿದಳೆಂದು ಕುಂದಗೌರಿಯೂ – ತಂತಮ್ಮ ಸುತ್ತಲಿನ ಇಷ್ಟಾಪ್ತಮಂದಿಯ ನಿಧನವಾರ್ತೆಗಳನ್ನೆಲ್ಲ ಚರ್ಚಿಸಿದರು.

'ನಿಮ್ಮ ಯಜಮಾನರಿಗೆ ಎಷ್ಟು ಜನ ಅಣ್ಣತಮ್ಮಂದಿರು?' ಪುರೋಹಿತ ಕೇಳಿದ.

'ಇವರೇ ದೊಡ್ಡೋರು...' ಅಮ್ಮ ಹೇಳಿದಳು. 'ಬೆನ್ನಿನಲ್ಲಿ ಮೂರು ತಮ್ಮಂದಿರಿದ್ದರು... ಬದರೀನಾಥ ಕೊನೆಯವನು. ಮೂರನೇಯೋನು ಚಿಕ್ಕಂದಿನಲ್ಲೇ ಮನೆ ಬಿಟ್ಟುಹೋಗಿ ಕೊಲ್ಕೊತ್ತಾ ಕಡೇಲೆಲ್ಲೋ ಸೆಟಲ್ ಆದನಂತೆ. ನಮ್ಮಗಳ ಜೊತೆ ಸಂಪರ್ಕ ಇಲ್ಲ... ನನ್ನ ಎರಡನೇ ಮೈದುನ ಚೆನ್ನೈಯಲ್ಲಿದ್ದಾನೆ... ಅವನಿಗೆ ಹೆಚ್ಚುಕಮ್ಮಿ ನನ್ನ ವಯಸ್ಸೇ. ಎಪ್ಪತ್ತೆಂಟು ಎಪ್ಪತ್ತೊಂಬತ್ತು ಇದ್ದೀತು... ಅವನಿಗೂ ನಾವು ಯಾರೂ ಬೇಡ. ಹೇಳುತಾರಲ್ಲ – ಹುಟ್ಟುತಾ ಹುಟ್ಟುತಾ ಅಣ್ಣತಮ್ಮ; ಬೆಳೀತಾ ಬೆಳೀತಾ ದಾಯದಿಗಳು ಅಂತ!' ಮಾತಿನ ಕೊನೆಯಲ್ಲಿ ಅಮ್ಮ, ಇನ್ನೂ ಒಂದು ಸಂಗತಿಯನ್ನು ನನಗೆ ಮನದಟ್ಟು ಮಾಡುವ ಸಲುವಾಗಿಯೇ ಹೇಳಿದಳು. 'ಈ ಮನೆಯಲ್ಲಿ ಒಬ್ಬರಿಗೂ ಗಂಡುಮಕ್ಕಳಿಲ್ಲ...